ಅ) 2000-01, 2001-02ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ಸಾಲ ಪಡೆಯಲಿಕ್ಕೆ ಬಂದ ಅರ್ಜಿಗಳೆಷ್ಟು

ಆ) ಮೇಲ್ಕಂಡ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಸಾಲ ಮಂಜೂರು ಮಾಡಲಾಗಿದೆ, ತಾಲ್ಲೂಕುವಾರು ವಿವರ ನೀಡುವುದು.

ಇ) ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ಸಾಲ ಮಂಜೂರಾದ ಫಲಾನುಭವಿಗಳಿಗೆ ಬ್ಯಾಂಕಿನವರು ವಿಳಂಬ ಧೋರಣೆ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು)

ಅ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಧಾರವಾಡ ಜಿಲ್ಲೆಯಲ್ಲಿ 2000-01 ಮತ್ತು 2001-02ನೇ ಸಾಲಿಗೆ ಕ್ರಮವಾಗಿ 4722 ಮತ್ತು 3053 ಅರ್ಜಿಗಳು ಬಂದಿವೆ.

ಆ) ಈ 2 ವರ್ಷಗಳಲ್ಲಿ ಮಂಜೂರು ಮಾಡಿದ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ:

ತಾಲ್ಲೂಕು	2000-01		2001-02		
	ಗುರಿ	ಸಾಧನೆ	ಗುರಿ	ಸಾಧನೆ	
ಧಾರವಾಡ	271	254	250	219	
ಹುಬ್ಬಳ್ಳಿ	530	504	425	404	
ಕಲಘಟಗಿ	26	25	26	21	
ಕುಂದಗೋಳ	24	28	24	25	
	ಒಟ್ಟು	900	861	769	696

ಇ) ಕೆಲವೊಂದು ಪ್ರಕರಣಗಳಲ್ಲಿ ವಿಳಂಬ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಸರ್ಕಾರದ ಅಭಿವೃದ್ಧಿ ಆಯುಕ್ತರು ಉಪಸ್ಥಿತಿಯಲ್ಲಿ ನಡೆಯುವ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿಯ ಸಭೆಯಲ್ಲಿ ಇಂತಹ ಪ್ರಕರಣಗಳ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅಲ್ಲದೆ ಬ್ಯಾಂಕುಗಳಿಗೆ ಸ್ವೀಕರಿಸಿದ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸೂಚಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಹ ಇಂತಹ ಪ್ರಕರಣಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಎನ್.ಜಿ.ಇ.ಎಫ್ ಕಾರ್ಖಾನೆ ಕುರಿತು

601(1119) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗಾಮೀಣ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಜಿ.ಇ.ಎಫ್ ಕಾರ್ಖಾನೆಯನ್ನು ಬಿ.ಐ.ಎಫ್.ಆರ್. ಆದೇಶದಂತೆ ಪುನಶ್ಚೇತನಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಆ) ಈ ಕಾರ್ಖಾನೆಯನ್ನು ಮುಚ್ಚಲು ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ ಕಾರಣ ನೀಡುವುದು;

ಇ) ಈ ಕಾರ್ಖಾನೆಯು ಹೊಂದಿರುವ ಜಮೀನಿನ ಮೇಲೆ ಹಲವು ಪಟ್ಟಭದ್ರ ಹಿತಾಸಕ್ತಿಗಳು ಆಸಕ್ತಿ ಹೊಂದಿದ್ದು, ಈ ಕಾರಣಕ್ಕಾಗಿ ಕಾರ್ಖಾನೆಯನ್ನು ಮುಚ್ಚಲು ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ;

ಈ) ಎನ್‌ಜಿಇಎಫ್ ಗ್ರಾಹಕರು ನೀಡಿದ್ದ ಆದೇಶಗಳನ್ನು ಉತ್ಪಾದಕಗಳನ್ನು ಪೂರೈಸಲು ಸಾಧ್ಯವಿಲ್ಲವೆಂದು ಕಳೆದ 3 ತಿಂಗಳಿಂದ ಸಂಸ್ಥೆ ಗ್ರಾಹಕರಿಗೆ ತಿಳಿಸಿದೆ (ವಿವರ ನೀಡುವುದು);

ಉ) ಈ ಕಾರ್ಖಾನೆಯನ್ನು ಮುಚ್ಚಲು ಅನುಕೂಲವಾಗಲು ಉದ್ದೇಶ ಪೂರ್ವಕವಾಗಿ ಕಾರ್ಮಿಕರನ್ನು ಬಲವಂತವಾಗಿ ವಿಆರ್‌ಎಸ್ (ಸ್ವಯಂನಿವೃತ್ತಿ) ಆಡಳಿತ ವರ್ಗ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಿಐಎಫ್‌ಆರ್ ಈ ಕಾರ್ಖಾನೆಯನ್ನು ಮುಚ್ಚಲು ಆದೇಶ ನೀಡಿದೆ ಎಂದು ಕಾರ್ಮಿಕರಲ್ಲಿ ಭಯದ ವಾತಾವರಣ ಮೂಡಿಸಿ ಅವರುಗಳಿಗೆ ಕಾರ್ಖಾನೆ ಮುಚ್ಚಲಿರುವುದರಿಂದ ಸ್ವಯಂನಿವೃತ್ತಿ ಪಡೆಯಿರಿ ಇಲ್ಲದೇ ಇದ್ದಲ್ಲಿ ನಿಮ್ಮನ್ನು ವಜಾಗೊಳಿಸಲಾಗುವುದು ಎಂದು ನೋಟಿಸ್ ನೀಡಿ ಬಲವಂತವಾಗಿ ಸ್ವಯಂನಿವೃತ್ತಿ ಪಡೆಯುವಂತೆ ಸೂಚಿಸುತ್ತಿರುವುದು ಸರಿಯೇ, ಹಾಗಿದ್ದಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.)

ಅ) ಬಿ.ಐ.ಎಫ್.ಆರ್. ದಿ: 19.4.2002ರಂದು ಬೆಂಗಳೂರಿನಲ್ಲಿ ನಡೆಸಿದ ತನ್ನ ವಿಚಾರಣೆಯಲ್ಲಿ ಕಾರ್ಮಿಕ ಸಂಘಗಳು, ಬ್ಯಾಂಕುಗಳು, ಕರ್ನಾಕ ಸರ್ಕಾರ ಮತ್ತು ಸಂಸ್ಥೆಯ ನಿಲುವುಗಳನ್ನು ಆಲಿಸಿದ ನಂತರ ಸಂಸ್ಥೆಗೆ ಯುಕ್ತ ಅವಧಿಯಲ್ಲಿ ಅದರ ನಿವ್ವಳ ಮೌಲ್ಯವನ್ನು ಸಕಾರಾತ್ಮಕಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಮೇಲ್ನೋಟಕ್ಕೆ ಎನ್‌ಜಿಇಎಫ್ ಮುಚ್ಚುವುದಕ್ಕೆ ಯೋಗ್ಯ ಸಂಸ್ಥೆಯೆಂದು ಘೋಷಿಸಿ ಸಂಸ್ಥೆಯನ್ನು ಮುಚ್ಚುವ ಸಂಬಂಧದಲ್ಲಿ ಕಾರಣ ಕೇಳಿ ರಾಜ್ಯ ಸರ್ಕಾರಕ್ಕೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿ, ಅಂತಿಮವಾಗಿ ಆದೇಶ ನೀಡಲು ದಿ: 2.8.2002 ರಂದು ವಿಚಾರಣೆಯನ್ನು ನಿಗದಿಪಡಿಸಿರುತ್ತದೆ.

ಆ) ಹೌದು. ಸಂಸ್ಥೆಯು 1991-92ರಿಂದ ಸತತವಾಗಿ ನಷ್ಟವನ್ನು ಅನುಭವಿಸುತ್ತಿದೆ ಮತ್ತು 2001-02 ಸಾಲಿಗೆ ಕ್ರೋಢೀಕೃತ ನಷ್ಟವು ಸರಿಸುಮಾರು 250 ಕೋಟಿ ರೂ.ಗಳಾಗಿದ್ದು, ಸಂಸ್ಥೆಗೆ ಅದರ ನಿವ್ವಳ ಮೌಲ್ಯದ ಸಂಪೂರ್ಣ ಅವನತಿಯಾಗುತ್ತಿತ್ತು. ಈ ದೃಷ್ಟಿಯಿಂದ ಸರ್ಕಾರ ಸಂಸ್ಥೆಯ ಕಾರ್ಯ ನಿರ್ವಹಣೆಯನ್ನು ವಿವರವಾಗಿ ಪರಿಶೀಲಿಸಿದ ನಂತರ ಸಂಸ್ಥೆಯನ್ನು ಖಾಸಗೀಕರಣಗೊಳಿಸಲು ತಪ್ಪಿದಲ್ಲಿ ಕೆ.ಎಸ್.ಬಿ.ಪಿ.ಇ. ಮಾರ್ಗ ದರ್ಶನದ ಪ್ರಕಾರ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆಯ ಅವಕಾಶ ಕಲ್ಪಿಸಿ ಸಂಸ್ಥೆಯನ್ನು ಮುಚ್ಚಲು 31.3.2001 ಮತ್ತು 4.10.2001ರ ಸರ್ಕಾರಿ ಆದೇಶವನ್ನು ಜಾರಿ ಮಾಡಿತು.

ಇ) ಇಲ್ಲ.

ಈ) ಗ್ರಾಹಕರು ವ್ಯಕ್ತಪಡಿಸಿದ ಕಳವಳಕ್ಕೆ ಉತ್ತರವಾಗಿ ಸಂಸ್ಥೆಯು ವಿಶೇಷವಾಗಿ ಎನ್.ಪಿ.ಸಿ.ಐ.ಎಲ್., ಕೆ.ಪಿ.ಟಿ.ಸಿ.ಎಲ್. ಮತ್ತು ಡಿ.ವಿ.ಬಿ. ಸಂಸ್ಥೆಗಳಿಗೆ ಅಗಿಂದಾಗ್ಗೆ ಎನ್‌ಜಿಇಎಫ್ ಬೆಳವಣಿಗೆಗಳು ಸರ್ಕಾರದ ನಿರ್ಧಾರಗಳು ಬಿ.ಐ.ಎಫ್.ಆರ್. ಹಾಗೂ ಅದರ ಆದೇಶಗಳ ಬಗ್ಗೆ ಮೇಲೆ ಹೇಳಿದ ಸಂಸ್ಥೆಗಳ ಗಮನ ಸೆಳೆಯಲಾಗಿದೆ. ಈ ಮಾಹಿತಿಯ ಆಧಾರ ಹಾಗೂ ಸ್ವಯಂ ಅರಿವಿನ ಮೇರೆಗೆ ಎನ್.ಪಿ.ಸಿ.ಐ.ಎಲ್ ತನ್ನ ಆದೇಶಗಳನ್ನು ಅವಧಿಗೆ ಮೊದಲು ಪೈಸಲುಗೊಳಿಸಿತು. ಕೆಪಿಟಿಸಿಎಲ್ ತನ್ನ ಆದೇಶಗಳನ್ನು ಬೇರೆ ಕಡೆ ನೀಡಿತು. ಡಿ.ವಿ.ಬಿ. ಗ್ರಾಹಕರು ತನ್ನ ಆದೇಶಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿತು.

ಉ) ಸ್ವಯಂ ನಿವೃತ್ತಿಯನ್ನು ಸಂಸ್ಥೆಯು ಕೆಎಸ್‌ಬಿಪಿಇ ಮಾರ್ಗದರ್ಶನದ ಪ್ರಕಾರ ಎರಡು ಬಾರಿ ಅಂದರೆ ಒಮ್ಮೆ ದಿ: 19.4.2002ರ ಬಿಐಎಫ್‌ಆರ್ ವಿಚಾರಣೆಗೆ ಮೊದಲು, ಮತ್ತೊಮ್ಮೆ ಸಂಸ್ಥೆಯನ್ನು ಮುಚ್ಚುವುದಕ್ಕೆ ಕಾರಣ ಕೇಳಿ ತಿಳುವಳಿಕೆ ಪತ್ರ ನೀಡುವುದಾಗಿ ಬಿಐಎಫ್‌ಆರ್ ತನ್ನ ವಿಚಾರಣೆಯಲ್ಲಿ ನಿರ್ಣಯ ಕೈಗೊಂಡ ದಿ: 19.4.2002ರ ನಂತರ ಹೀಗೆ ಎರಡು ಬಾರಿ ಸ್ವಯಂನಿವೃತ್ತಿ ಯೋಜನೆಯನ್ನು ಪ್ರಕಟಿಸಿತು.

ದಿ: 19.4.2002ಕ್ಕೆ ಮೊದಲು, ಸರಿಸುಮಾರು 938 ಉದ್ಯೋಗಿಗಳು ಸ್ವಯಂನಿವೃತ್ತಿಯನ್ನು ಆಯ್ಕೆ ಮಾಡಿ ಕೊಂಡಿದ್ದು, ಅವರುಗಳನ್ನು ಸ್ವಯಂನಿವೃತ್ತಿ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ದಿ: 19.4.2002ರ ನಂತರ ಅಂದರೆ ಬಿಐಎಫ್‌ಆರ್‌ನ ವಿಚಾರಣೆಯ ನಂತರ 1067 ಉದ್ಯೋಗಿಗಳು ಸ್ವಯಂ ವೃತ್ತಿಯನ್ನು ಆಯ್ಕೆ ಮಾಡಿ ಕೊಂಡರು ಅವರುಗಳನ್ನೂ ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಪ್ರಸ್ತುತದಲ್ಲಿ 909 ಉದ್ಯೋಗಿಗಳಿದ್ದು, ಅವರಲ್ಲಿ 709 ಉದ್ ್ಯೋಗಿಗಳು ಈಗಾಗಲೇ ಸ್ವಯಂನಿವೃತ್ತಿ ಯೋಜನೆಗೆ ತಮ್ಮ ಅರ್ಜಿಗಳನ್ನು ಸಲ್ಲಿಸಿದ್ದಾರೆ ಮತ್ತು ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಅವರುಗಳನ್ನು ಬಿಡುಗಡೆ ಮಾಡಲಾಗುವುದು. ನಿಯೋಜನೆಯಲ್ಲಿರುವ 64 ಉದ್ಯೋಗಿಗಳೂ ಸೇರಿದಂತೆ ಉಳಿದ 200 ಮಂದಿ ಉದ್ಯೋಗಿಗಳು ಸ್ವಯಂನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಸ್ವಯಂನಿವೃತ್ತಿ ಯೋಜನೆಗಾಗಿ ಈವರೆಗೆ 95 ಕೋಟಿ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ ಮತ್ತು ಇಳಿದ ಉದ್ಯೋಗಿಗಳಿಗೆ ಸ್ವಯಂನಿವೃತ್ತಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲು, ರೂ. 50 ಕೋಟಿಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇದಾಗ್ಯೂ, ಎನ್‌ಎಫ್, ಪಿಇಡಿ: ಪಿಎಸ್‌ಡಿ ಮತ್ತು ಎಸ್‌ಇಡಿ ವಿಭಾಗಗಳನ್ನು ಮುಚ್ಚಲು ಕಾರ್ಮಿಕ ಕಾರ್ಯದರ್ಶಿಯವರು ಒಪ್ಪಿಗೆ ನೀಡಿದ್ದು ಮತ್ತು ಕಾರ್ಮಿಕ ಆಯುಕ್ತರು 301 ಉದ್ಯೋಗಿಗಳನ್ನು ರಿಟ್ರೆಂಚ್ ಮಾಡಲು ಆದೇಶವನ್ನು ಹೊರಡಿಸಿದ್ದಾರೆ. ಈವರೆವಿಗೂ ಯಾವೊಬ್ಬ ಉದ್ಯೋಗಿಯನ್ನೂ ಸಂಸ್ಥೆಯು ರಿಟ್ರೆಂಟ್ ಮಾಡಿಲ್ಲ.

ಮಂಗಳೂರು ಗೊಬ್ಬರ ಕಾರ್ಖಾನೆ

602(1120) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗಾಮೀಣ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?